ಅಸಲು ದಾವೆ ಸಂ:**62/2024** ಪಿ.ಡಬ್ಲ್ಯು- **1**

**ದಿ: 07-03-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ವಾಟೀ ಸವಾಲು: ಪ್ರತಿವಾದಿ ಪರ ಶ್ರೀ ಬಿ.ಎಸ್.ಡಿ ವಕೀಲರಿಂದ :**

1. ಈ ದಾವಾವನ್ನು ನಾನು ಇಮಾಮ ಅಲೀ ಅವರ ವಿರುದ್ಧ ಅವರ ಹೊಲ ನಮ್ಮ ಹೊಲದಲ್ಲಿ ಬರುತ್ತದೆ ಎಂದು ತಕರಾರು ಮಾಡುತ್ತಿರುವುದರಿಂದ ಸಲ್ಲಿಸಿರುತ್ತೇನೆ. ಇದೇ ರೀತಿ ನನ್ನ ಸಾಕ್ಷಿ ಪ್ರಮಾಣ ಪತ್ರ ಮತ್ತು ವಾದ ಪತ್ರದಲ್ಲಿ ಹೇಳಿ ಬರೆಸಿರುತ್ತೇನೆ. ಪ್ರತಿವಾದಿಗೆ ಸರ್ವೆ ನಂಬರ 29 ರಲ್ಲಿ 1 ಎಕರೆ ಹೊಲ ಇರುತ್ತದೆ. ಆ ಒಂದು ಎಕರೆಗೆ ಪ್ರತಿವಾದಿಯೇ ಮಾಲೀಕ ಮತ್ತು ಕಬ್ಜೆದಾರನಾಗಿರುತ್ತಾನೆ. ನನ್ನ ಹೊಲದ ಉತ್ತರ ದಿಕ್ಕಿಗೆ ಪ್ರತಿವಾದಿಯ ಜಮೀನು ಇರುತ್ತದೆ. ಪ್ರತಿವಾದಿಯ ಹೊಲದ ದಕ್ಷಿಣ ದಿಕ್ಕಿಗೆ ನನ್ನ ಹೊಲಕ್ಕೆ ಹತ್ತಿಕೊಂಡು ಪೂರ್ವ-ಪಶ್ಚಿಮ ದಿಕ್ಕಿಗೆ ಮ್ಯಾರಿ ಇರುತ್ತದೆ. ಪ್ರತಿವಾದಿಯ 1 ಎಕರೆ ಹೊಲದ ಚೆಕ್ಬಂದಿ ಪೂರ್ವ ದಿಕ್ಕಿಗೆ - ಖೇಣೆದ ಈಶಪ್ಪ ಇವರ ಹೊಲ ಇದೆ, ಪಶ್ಚಿಮ ದಿಕ್ಕಿಗೆ - ಹಳ್ಳ ಇದೆ, ಉತ್ತರ ದಿಕ್ಕಿಗೆ - ಜಹಿರುದ್ದೀನ್

ಮತ್ತು ಜಾಫರ ಸಾಬ ಇವರ ಹೊಲ ಇರುತ್ತದೆ ಮತ್ತು ದಕ್ಷಿಣ ದಿಕ್ಕಿಗೆ - ನನ್ನ, ಬಾಬು ಮತ್ತು ಮಹಿಬೂಬಸಾಬ ಇವರ ಹೊಲಗಳು ಇರುತ್ತವೆ. ಪ್ರತಿವಾದಿಯ ಹೊಲದ ದಕ್ಷಿಣ ದಿಕ್ಕಿಗೆ ಪಡಶೆಟ್ಟಿ ಶರಣಪ್ಪ ಮತ್ತು ಶಿವುಕುಮಾರ ಇವರ ಹೊಲಗಳು ಒಂದೇ ಮೇರೆಗೆ ಹತ್ತಿಕೊಂಡಿರುತ್ತವೆ.

2. ನನ್ನ ಹೊಲದ ಸರ್ವೆ ನಂಬರ 29 ಹಿಸ್ಸಾ ನಂಬರ 7 ವಿಸ್ತೀರ್ಣ 37 ಗುಂಟೆ ಅಂತಾ ಇರುತ್ತದೆ. ಈ ಜಮೀನು ನನ್ನ ತಂದೆಯಿಂದ ನನ್ನ ಹೆಸರಿಗೆ ಬಂದಿರುತ್ತದೆ. ನನ್ನ ತಂದೆಯ ಆಸ್ತಿಯಾಗಿದ್ದು ನನಗೆ ಭಾಗದಲ್ಲಿ 2018 ರಲ್ಲಿ ಬಂದಿರುತ್ತದೆ. ಭಾಗವನ್ನು ಹೇಗೆ ಮಾಡಿಕೊಂಡಿದ್ದಿರಾ ಎಂದರೆ ಸಾಕ್ಷಿಯು ಸರ್ವೆ ಮಾಡಿಕೊಂಡು ಭಾಗ ಮಾಡಿಕೊಂಡಿದ್ದೇವೆ ಎಂದು ಹೇಳುತ್ತಾರೆ. 2018 ರಲ್ಲಿ ಖಾಸಗಿ ಸರ್ವೆ ಮಾಡಿಸಿರುತ್ತೇವೆ ಅದರ ದಾಖಲಾತಿಯನ್ನು ನ್ಯಾಯಾಲಯಕ್ಕೆ ಕೊಟ್ಟಿರುವುದಿಲ್ಲ. ನೀವು ಯಾವುದೇ ಸರ್ವೆ ಮಾಡಿಸಿರುವುದಿಲ್ಲ ಹಾಗಾಗಿ ಅದರ ದಾಖಲಾತಿಯನ್ನು ನ್ಯಾಯಾಲಯಕ್ಕೆ ಕೊಟ್ಟಿರುವುದಿಲ್ಲ ಎಂದರೆ ಸಾಕ್ಷಿಯು ನಾವು ಖಾಸಗಿ ಸರ್ವೆ ಮಾಡಿಸಿದ್ದೇವೆ ಎನ್ನುತ್ತಾರೆ. ಖಾಸಗಿ ಸರ್ವೆಯವರು ಸರ್ವೆ ಮಾಡಿದ ದಾಖಲಾತಿಯನ್ನು ನನಗೆ ಕೊಟ್ಟಿರುವುದಿಲ್ಲ. ವಿಭಾಗ ಮಾಡಿಕೊಂಡರೆ ಕಡ್ಡಾಯವಾಗಿ 11ಇ ನಕಾಶೆ ಮತ್ತು ನೋಂದಣಿ ಪತ್ರ ಕಡ್ಡಾಯವಾಗಿ ಮಾಡಿಸಬೇಕು ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ. ನೀವು 37 ಗುಂಟೆ ದಾವಾ ಆಸ್ತಿಯ ಕಬ್ಜೆಯಲ್ಲಿ ಇದ್ದಿರಾ ಎಂದು ತೋರಿಸಲು ಪಹಣಿಯನ್ನು ಬಿಟ್ಟು ಬೇರೆ ಯಾವುದೇ ದಾಖಲಾತಿಯನ್ನು ಕೊಟ್ಟಿಲ್ಲ ಎಂದರೆ ಸರಿ. ನೀವು ಮತ್ತು ನಿಮ್ಮ ಇಬ್ಬರು ಸಹೋದರರು ನಿಮ್ಮ ತಂದೆಯಿಂದ ನಿಮ್ಮ ಹೆಸರಿಗೆ ಆಸ್ತಿಗಳನ್ನು ವಿಭಾಗ ಮಾಡಿಕೊಂಡಿದ್ದಿರಾ ಎಂದು ಯಾವುದೇ ದಾಖಲಾತಿಗಳನ್ನು ಕೊಟ್ಟಿಲ್ಲ ಎಂದರೆ ಸರಿಯಲ್ಲ.

3. ಸಾಸಿ◌್ವಗೇರಾ ಗ್ರಾಮದ ಸರ್ವೆ ನಂಬರ 29 ರಲ್ಲಿ ದೇವದುರ್ಗ ರಾಯಚೂರು ಮುಖ್ಯ ರಸ್ತೆ ಹೋಗಿದೆ ಎಂದರೆ ಸರಿ. ನಿಮ್ಮ ಮತ್ತು ನಿಮ್ಮ ಇಬ್ಬರು ಸಹೋದರರ ಹೊಲಗಳಿಗೆ ದೇವದುರ್ಗ - ರಾಯಚೂರು ಮುಖ್ಯ ರಸ್ತೆ ಹೋಗಿದೆ ಎಂದರೆ ಸಾಕ್ಷಿಯು ಮೊದಲಿನಿಂದಲೂ ರಸ್ತೆ ಹೋಗಿದೆ ಎನ್ನುತ್ತಾರೆ, ಸಾಕ್ಷಿ ಮುಂದುವರೆದು ರಸ್ತೆಗೆ ಬಿಟ್ಟು ಇರುತ್ತದೆ ಎಂದು ಹೇಳುತ್ತಾರೆ. ಸರ್ವೆ ನಂಬರ 29 ರಲ್ಲಿ ದೇವದುರ್ಗ - ರಾಯಚೂರು ಮುಖ್ಯ ರಸ್ತೆ ನಿಮ್ಮ ಹೊಲಗಳಲ್ಲಿ ಹೋಗಿದೆ ಎಂದು ನೀವು ಅಳತೆಯನ್ನು ಮಾಡಿಸಿರುವುದಿಲ್ಲ ಎಂದರೆ ಸಾಕ್ಷಿಯು ರಸ್ತೆ ಬಿಟ್ಟು ನಮ್ಮ ಹೊಲವನ್ನು ಅಳತೆ ಮಾಡಿಸಿದ್ದೇವೆ ಎನ್ನುತ್ತಾರೆ. ನಿಮ್ಮ ಜಮೀನಿನಲ್ಲಿ ರಸ್ತೆಯನ್ನು ಬಿಟ್ಟು ನಿಮ್ಮ ಹೊಲವನ್ನು ಅಳತೆ ಮಾಡಿಸಿದ್ದಿರಾ ಎಂದು ಸುಳ್ಳು ಹೇಳುತ್ತಿದ್ದಿರಾ ಎಂದರೆ ಸರಿಯಲ್ಲ.

4. ಪ್ರತಿವಾದಿ ನಮ್ಮ ಹೆಸರಿನಲ್ಲಿ ಹೊಲ ಆದ ಮೇಲೆ ದಿನಾಂಕ 28-11-2023 ರಲ್ಲಿ ತಕರಾರು ಮಾಡಿರುತ್ತಾರೆ. ಇದಾದ ನಂತರ ತಕರಾರು ಮಾಡಿರುತ್ತಾರೆ ನಾನು ಮೊದಲಿಗೆ ನ್ಯಾಯಾಲಯಕ್ಕೆ ಬಂದಿರುತ್ತೇನೆ. ನನಗೆ ಮತ್ತು ನನ್ನ ಇಬ್ಬರು ಸಹೋದರರಿಗೆ ಪ್ರತಿವಾದಿ ಒಂದೇ ದಿವಸ ತಕರಾರು ಮಾಡಿರುತ್ತಾನೆ ನಾವು 03 ಜನ ನ್ಯಾಯಾಲಯಕ್ಕೆ ದಾವೆಯನ್ನು ಸಲ್ಲಿಸಿರುತ್ತೇವೆ. ಪ್ರತಿವಾದಿ ನಿಮ್ಮ ಹೊಲಕ್ಕೆ ತಕರಾರು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಿಮ್ಮ ದಾವಾ ಆಸ್ತಿ 37 ಗುಂಟೆ ಕಬ್ಜೆಯಲ್ಲಿ ನೀವು ಇರುವುದಿಲ್ಲ ಪ್ರತಿವಾದಿಯನ್ನು ಕಬಳಿಸಬೇಕು ಎಂಬ ಉದ್ದೇಶದಿಂದ ಸುಳ್ಳು ದಾವೆ ಸಲ್ಲಿಸಿದ್ದಿರಿ ಎಂದರೆ ಸರಿಯಲ್ಲ. ನಿಮ್ಮ ತಂದೆಯಿಂದ ನಿಮ್ಮ ಹೆಸರಿಗೆ ಭಾಗ ಆಗಿರುವುದಿಲ್ಲ ಮತ್ತು ಅಳತೆಯನ್ನು ಮಾಡಿಸಿರುವುದಿಲ್ಲಎಂದರೆ ಸರಿಯಲ್ಲ. ಯಾವುದೇ ದಾಖಲಾತಿಗಳು ಇಲ್ಲದೇ ಇದ್ದರೂ ಕಂದಾಯ ಅಧಿಕಾರಿಗಳೊಂದಿಗೆ ಶಾಮೀಲಾಗಿ ಸುಳ್ಳು ದಾಖಲೆಗಳನ್ನು ಸೃಷ್ಟಿ ಮಾಡಿದ್ದಿರಾ ಎಂದರೆ ಸರಿಯಲ್ಲ. ದಾಖಲಾತಿಗಳನ್ನು ಸೃಷ್ಟಿಸಿ ಪ್ರತಿವಾದಿಯ ಜಮೀನನ್ನು ಕಬಳಿಸಬೇಕು ಎಂಬ ಉದ್ದೇಶದಿಂದ ಸುಳ್ಳು ದಾವೆಯನ್ನು ಸಲ್ಲಿಸಿದ್ದಿರಾ ಎಂದರೆ ಸರಿಯಲ್ಲ. ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ಬರೆಸಿರುವ ಎಲ್ಲಾ ವಿಷಯಗಳು ಸುಳ್ಳಾಗಿರುತ್ತವೆ ಎಂದರೆ ಸರಿಯಲ್ಲ. ದಾವೆ ಸಲ್ಲಿಸಲು ನಿಮಗೆ ಯಾವುದೇ ವ್ಯಾಜ್ಯ ಕಾರಣ ಉಂಟಾಗಿಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

(ಸಾಕ್ಷಿಯು ನೀಡಿರುವ ಸಾಕ್ಷವನ್ನು ಯಥಾವತ್ತಾಗಿ ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

**ಓ.ಹೇ.ಕೇ.ಸರಿ ಇದೆ.**

ಸಹಿ**/-**

ಸಿವಿಲ್ ಜಡ್ಜ್ & ಜೆ.ಎಂ.ಎಫ್.ಸಿ.

ದೇವದುರ್ಗ